**ಕೋಷ್ಟಕ ವಿವಿಧ ಕೀಟ ಪೀಡೆಗಳ ನಿರ್ವಹಣೆಗೆ ಬಳಬಹುದಾದ ಪರಭಕ್ಷಗಳ ಪ್ರಮಾಣ ಮತ್ತು ವಿಧಾನ**

| ಅ.ಸಂ | ಪರಭಕ್ಷಕ | ಬೆಳೆ | ಪೀಡೆ | ಪ್ರಮಾಣ ಮತ್ತು ವಿಧಾನ |
|---|---|---|---|---|
| 1. | ಕ್ರೈಸೋಪರ್ಲಾ ಕಾರ್ನಿಯಾ | ಹತ್ತಿ ಎಣ್ಣೆ ಕಾಳು, ತಂಬಾಕು ಹಾಗೂ ಹಣ್ಣಿನ ಇತ್ಯಾದಿ | ಹೇನು,ಥ್ರೀಪ್ಸ ನುಶಿ ಮೈಟ್ ನುಶಿ ತತ್ತಿ ಹಾಗೂ ಮರಿ ಕೀಡೆಗಳು | ಪ್ರತಿ ಹೆಕ್ಟೇರಿಗೆ 10,000 ರಿಂದ 20,000 ಮರಿಹುಳಗಳನ್ನು ಕೀಡೆ ಕಂಡ ತಕ್ಷಣ ಬೀಡಬೇಕು. |
| 2. | ಕ್ರಿಪ್ಟೋಲೆಮಸ್ ಮಾಂಟ್ರೊಜರಿ | ದ್ರಾಕ್ಷಿ, ಲಿಂಬೆ, ಪೇರಲ ಮಾವು ಇತ್ಯಾದಿ | ಹಿಟ್ಟು ತಿಗಣೆ ಹಿಟ್ಟು ತಿಗಣೆ | ಪ್ರತಿ ಗಿಡಕ್ಕೆ 15–20 ದುಂಬಿಗಳನ್ನು ಬಿಡುವುದು ಅಥವಾ ಪ್ರತಿ ಎಕರೆಗೆ 2,500–3000 ದುಂಬಿಗಳು |
| 3. | ಕೈಲೋಕೋರಿಸ್ | ಲಿಂಬೆ, ಮೊಸಂಬಿ | ಕೆಂಪು ಶುಲ್ಕ ಕೀಟ | ಪ್ರತಿ ಗಿಡಕ್ಕೆ 15 ದುಂಬಿಗಳನ್ನು ಬಿಡುವುದು |
| 4. | ಕೈಲೋಮೆನಸ್ ಸೆಕ್ಸಮ್ಯಾಕುರ್ಲೇರಸ್ | ಎಲ್ಲಾ ಬೆಳೆಗಳಲ್ಲಿ | ಹೇನುಗಳು | ಪ್ರತಿ ಹೆಕ್ಟೇರಿಗೆ 50,000 ಮರಿ ಹುಳುಗಳನ್ನು ಬಿಡುವುದು |
| 5. | ಸಿರ್ಟೋರ್ರೈನಸ್ ಲಿವಿಡಿಪೆನ್ನಿಸ್ | ಭತ್ತ | ಕಂದು ಜಿಗಿ ಹುಳು | ಹಕ್ಟೇರಿಗೆ 70,000 ಪ್ರೌಢ ತಿಗಣೆಗಳಂತೆ ನಾಟಿ |
| 6. | ಮೈಕ್ರೋಮಸ್ ಇಗೊರೋಟಸ್ | ಕಬ್ಬು | ಬಿಳಿ ಉಣ್ಣೆ ಹೇನು | ಹೆಕ್ಟೇರಿಗೆ 1000–1500 ಕೋಶಗಳನ್ನು ಬಿಳಿ ಉಣ್ಣೆ ಹೇನು ಕಂಡು ಬಂದ ಬೆಳೆಯಲ್ಲಿ ಬಿಡುವುದು. |

**ಕೋಷ್ಠಕ ಕೀಟ ಪೀಡೆಗಳ ನಿರ್ವಹಣೆ ಲಭ್ಯವಿರುವ ಶಿಲೀಂದ್ರ ದುಂಡಾಣು ಹಾಗೂ ನಂಜಾಣುಗಳ ವಿವರ**

| ಅ.ಸಂ | ಪರಭಕ್ಷಕ | ಬೆಳೆ | ಪೀಡೆ | ಪ್ರಮಾಣ ಮತ್ತು ವಿಧಾನ |
|---|---|---|---|---|
| 1. | ನೊಮೋರಿಯ ರಿಲ್ಯೆ | ತಂಬಾಕಿನ ಕೀಡೆ, ಹೆಲಿಕೋವರ್ಪ ಕೀಡೆ, ಕೋಂಡಲಿಹುಳಗಳ ಎಲೆ ಮಾಡಚುವ ಹುಳು ಕಂಬಳಿಹುಳು ಇತ್ಯಾದಿ | ಶೇಂಗಾ, ಹತ್ತಿ, ಸೋಯಾ ಅವರೆ ಟೊಮೆಟೊ, ಕಡಲೆ, ಹೆಸರು, ಜೋಳ, ಭತ್ತ ಹೆಸರು | ಪ್ರತಿ 1 ಲೀ ನೀರಿಗೆ ಒಂದು ಗ್ರಾಂ ಶೀಲೀಂದ್ರನಾಶಕವನ್ನು ಬೆರೆಸಿ ಸಂಜೆಯ ವೇಳೆ ಸಿಂಪರಿಸಬೇಕು, ಹೆಕ್ಟೇರಿಗೆ 500 ಲೀ. ಸಿಂಪರಣಾ ದ್ರಾವಣ ಉಪಯೋಗಿಸಬೇಕು |
| 2. | ಮೆಟರೈಜಿಯಂ ಅನಿಸೊಪ್ಲಿಯ | ವಜ್ರಾಕೃತಿಯ ಬೆನ್ನಿನ ಪತಂಗ ಹಿಲಿಯೋಥಿಸ್ ಕೀಡೆ, ಕೊಂಡಲಿಹುಳಗಳ ಎಲೆ ಮಡಚುವ ಹುಳು ಗೆದ್ದಲು ಗೊಣ್ಣೆಹುಳು ರೈನಾಸೋಸ್ ದುಂಬಿ, ಕಂದು ಜಿಗಿಹುಳುಗಳು ಇತ್ಯಾದಿ | ಕೋಸು ತರಕಾರಿಗಳು, ಹತ್ತಿ ಶೇಂಗಾ, ಟೋಮೆಟೊ,ಕಾಫಿ | ಗೊಣ್ಣೆಗಳು ಹಾಗೂ ಗೆದ್ದಲಿನ ಹತೋಟಿಗಾಗಿ 5 ಕೆಜಿ ಶಿಲೀಂದ್ರವನ್ನು 500–1000 ಕೆಜಿ ಕೊಟ್ಟಿಗೆ ಗೊಬ್ಬರದೊಡನೆ ಬೆರೆಸಿ ಜೂನ್–ಜುಲೈ ತಿಂಗಳಿನಲ್ಲಿ ಭೂಮಿಯಲ್ಲಿ ಬೆರಸಬೇಕು ಉಳಿದ ಕಿಡೆಗಳಿಗೆ 2 ಗ್ರಾಂ ಶಿಲೀಂದ್ರವನ್ನು, ಉಳಿದ ಕೀಡುಗಳಿಗೆ 2 ಗ್ರಾಂ ಶಿಲೀಂದ್ರವನ್ನು 1 ಲೀ ನೀರಿಗೆ ಬೆರೆಸಿ ಸಾಯಂಕಾಲ ಸಿಂಪರಣೆ ಮಾಡಬೇಕು |
| 3. | ಲೆಕ್ಯಾನಿಸಿಲಿಯಂ ಲೆಕಾನಿ | ಹಲವು ಬೆಳೆಗಳು | ರಸಹಿರುವ ಕೀಟಗಳು | 2 ಗ್ರಾಂ ಸಿಲೀಂದ್ರವನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಸಾಯಂಕಾಲ ಬೆಳೆಗಳಿಗೆ ಸಿಂಪರಿಸಿ |
| 4. | ಬೆವರಿಯಾ ಬಸ್ಸಿಯನ್ | ವಜ್ರಾಕೃತಿಯ ಬನ್ನಿನ ಪತಂಗ ಎಲೆ ತಿನ್ನುವ ಕೀಟಗಳು ಗೆದ್ದಲು ಜಿಗಿಹುಳಗಳು ಕಾಪಿ ಬೀಜ ಕೊರಕ ಇತ್ಯಾದಿ | ಕೋಸು ತರಕಾರಿಗಳು, ಹತ್ತಿ | 2 ಗ್ರಾಣ ಶಿಲೀಂದ್ರವನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಸಾಯಂಕಾಲ ಬೆಳಗಳಿಗೆ ಸಿಂಪರಿಸಿ. |
| 5. | ನಂಜಾಣುಗಳು (ಬಹುದೇಹಿ ಕೋಶ ಕೇಂದ್ರ ನಂಜಾಣುಗಳು ಸ್ಪೋಡಾಪ್ಟೆರಾ ನಂಜಾಣುಲದ್ದಿ ಹುಳದ ನಂಜಾಣು | ಹೆಲಿಕೊವರ್ಪಾ, ಸ್ಪೋಡಾಪ್ಟೆರಾ, ಲದ್ದಿಹುಳು | ವಿವಿಧ ಬೆಳೆಗಳು | ಪ್ರತಿ ಹೆಕ್ಟೇರಿಗೆ 250 ಇಲ್.ಇ (ಹತ್ತಿಯಲ್ಲಿ 500 ಎಲ್.ಇ.ನಂಜಾಣು ಶೇ.0.1ರ ಬೋರಿಕ್ ಪೌಡರ್ ಮತ್ತು ಶೇ.0.5 ರ ಬೆಲ್ಲವನ್ನು ಕೂಡಿಸಿ ಸಂಜೆಯವೇಳೆ ಸಿಂಪಡಿಸಬೇಕು |

## ನೈಸರ್ಗಿಕ ಶತ್ರುಗಳ ಸಂರಕ್ಷಣೆಯಿಂದ ಕೀಟ ಹತೋಟಿ

ಮೇಲೆ ತಿಳಿಸಿದ ವಿಧಾನದಿಂದ ಕೀಟ ಹತೋಟಿ, ಮಾಡುವುದಕ್ಕಿಂತ ಇದು ಹೆಚ್ಚಿನ ಮಹತ್ವ ಪಡಿದಿದೆಯಲ್ಲದೆ. ಆಯಾ ಪ್ರದೇಶದಲ್ಲಿರುವ ನೈಸರ್ಗಿಕ ಶತ್ರುಗಳನ್ನು ಸಂರಕ್ಷಿಸಿ ಕೀಟ ಹತೋಟಿ ಮಾಡುವ ವಿಧಾನವಾಗಿದೆ. ಜಗತ್ತಿನಲ್ಲಿ 12 ಬೃಹತ್ತ ಪ್ರಮಾಣದಲ್ಲಿ ವೈವಿದ್ಯಮಯ ಜೈವಿಕ ಸಂಕುಲನ ಹೊಂದಿದ ಪ್ರದೇಶಗಳಲ್ಲಿ ನಮ್ಮ ದೇಶವು ಒಂದು. ನಮ್ಮ ದೇಶವು ಜಗತ್ತಿನಲ್ಲಿಯ ಆಸ್ಟ್ರೇಲಿಯಾವನ್ನು ಬಿಟ್ಟರೆ ಹೆಚ್ಚು ನೈಸರ್ಗಿಕ ಶತ್ರುಗಳನ್ನು ಹೊಂದಿದ ದೇಶವಾಗಿದೆ.

ಆದ್ದರಿಂದ ನಮ್ಮಲ್ಲಿರುವ ನೈಸರ್ಗಿಕ ಶತ್ರುಗಳನ್ನು ಉಳಿಸಿ, ಬೆಳೆಸಿ ಅವುಗಳಿಂದ ನಮ್ಮ ಬೆಳೆಗೆ ಬರುವ ಪ್ರಮುಖ ಕೀಡೆಗಳ ಹತೋಟಿ ಮಾಡಲು ಸಾಧ್ಯ ಇವುಗಳನ್ನು ಸಂರಕ್ಷಿಸಲು ಅನೇಕ ವಿಧಿ ವಿಧಾನಗಳಿದ್ದು ಹೆಚ್ಚಿನ ಖರ್ಚಿಲ್ಲದೆ ಬೇರೆ ಪ್ರದೇಶದಿಂದ ನೈಸರ್ಗಿಕ ಶತ್ರುಗಳನ್ನು ತರಿಸಿದೆ ನಾವು ನಮ್ಮ ಶತ್ರು ಕೀಟಗಳನ್ನು ಹತೊಟಿ ಮಾಡಲು ಸಾಧ್ಯ. ಹೊಲದಲ್ಲಿ ಹೂವಿನ ಗಿಡಗಳನ್ನು ಬೆಳಸವುದು. ಬೆಳೆಗಳಿಗೆ ಹೊದಿಕೆ ಹಾಕುವುದು. ಪಕ್ಷಿಗಳಿಗೆ ಆಶ್ರಯ ತಾಣ ಕಲ್ಪಿಸವುದು. ಅಂಥರ ಬೆಳೆ, ಮಿಶ್ರಬೆಳೆ ಬೆಳೆಯುವುದು ಇತ್ಯಾದಿ.

## ಸಸ್ಯಜನ್ಯ ಕೀಟನಾಶಕಗಳಿಂದ ಕೀಟ ನಿರ್ವಹಣೆ

ವಿವಿಧ ಬೆಳೆಗಳಲ್ಲಿ ಸಸ್ಯಜನ್ಯ ಕೀಟನಾಶಗಳು ಕೀಟನಾಶಕ ಗುಣಧರ್ಮ ಹೊಂದಿರುವುದರಿಂದ ಕೀಟಾಭಿವೃದ್ಧಿ ಕುಂಠಿತಗೊಡು ಕೀಟಗಳನ್ನು ನಿಯಂತ್ರಿಸುತ್ತವೆ. ಉಪಕಾರಿ ಕೀಟಗಳಿಗೆ ಯಾವುದೇ ರೀತಿಯ ಹಾನಿಯಾಗದೇ ಅವು ಹಾನಿಕಾರಕ ಕೀಟಗಳನ್ನು ನಿಯಂತ್ರಿಸಲು ಸಹಕಾರಿಯಾಗುತ್ತವೆ. ವಿವಿಧ ಬೆಳೆಗಳಲ್ಲಿ ರೋಗ ನಿರ್ವಹಣೆ ಕೂಡ ಮಾಡಬಹುದು. ಬೆಳೆಗಳಿಗೆ ಪೋಷಕಾಂಶಗಳನ್ನು ಕೂಡ ಪೂರೈಸುತ್ತವೆ. ಕಿಟ ಪೀಡೆಗಳ ಅತಿ ಸಮರ್ಪಕ ನಿರ್ವಹನೆ ಸಾಧ್ಯ. ಸಸ್ಯ ಸಂರಕ್ಷಣೆಯ ವೆಚ್ಚ ಕಡಿಮೆಯಾಗುತ್ತದೆ. ನೈಸರ್ಗಿಕ ಶತ್ರುಗಳ ಹಾಗೂ ವಾತಾವರಣದ ಮೇಲ ದುಷ್ಪರಿಣಾಮ ಕಡಿಮೆ.

ಸುಮಾರು 2121 ಸಸ್ಯಗಳು ಇಂಥಹ ಪೀಡೆ ನಿರ್ವಹಣಾ ಶಕ್ತಿಯನ್ನು ಹೊಂದಿವೆ ಎಂದು ಕಂಡು ಬಂದಿದೆ. ಇದರಲ್ಲಿ 1005 ಸಸ್ಯಗಳು ಕೀಟನಾಶಕ ಗುಣ, 384 ಸಸ್ಯಗಳು ಆಹಾರ ನಿರೋಧಕ ಗುಣ, 297 ಸಸ್ಯಗಳು ವಿಕರ್ಷಕ ಗುಣ, 27 ಸಸ್ಯಗಳು ಆಕರ್ಷಕ ಗುಣ, 31 ಸಸ್ಯಗಳು ಬೆಳವಣಿಗೆ ನಿರ್ಭಂಧಕ ಗುಣ, ಸಸ್ಯಗಳು ನಪಂಸಕತೆ ತರುವ ಗುಣಗಳನ್ನು ಹೊಂದಿವೆ ಎಂದು ಕಂಡು ಬಂದಿವೆ.

ನಮಗೆ ಸಸ್ಯ ಜಗತ್ತು ಪೀಡೆ ನಿವಾರಣೆಗೆ ಉಪಯೋಗವಾಗುವಂಥಹ ಬಹಳಷ್ಟು ಸಸ್ಯ ರಾಸಾಯನಿಕಗಳನ್ನು ಹೊಂದಿವೆ ಎಂಬುದು ಖಚಿತವಾಗುತ್ತದೆ. ಇಂಥಹ ಸಾಮಾನ್ಯವಾಗಿ ಲಭ್ಯವಿರುವ ಸಸ್ಯಗಳೆಂದರೆ ಬೇವು, ಬಜ್ಜೆ, ಗೇರ ಮರ, ಸೀತಾಫಲ, ಲಕ್ಕಿ, ಎಕ್ಕೆ, ಬಳ್ಳಾರಿ ಜಾಲಿ, ಹೊಂಗೆ ಮರ, ತಂಬಾಕು, ಬೇಲಿ ಕಂಟಿ, ಅಡಸಾಲಿ, ಮೀನುಮಾರಿ, ಕತ್ತಾಳೆ, ಚದುರಂಗ, ಕಾಗದದ ಹೂವು, ಮುಕ್ಕಡಕ, ಪಾರ್ಥೈನಿಯಂ, ಸದಾ ಮಲ್ಲಿಗೆ ಇತ್ಯಾದಿ ಗಿಡಗಳಂತಹ ಸಸ್ಯಗಳ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ಪದ್ಧತಿಗಳನ್ನು ಬಳಸಿ ವಿವಿಧ ರಸಾಯನಿಕಗಳನ್ನು ತೆಗೆದು ಪೀಡೆ ನಿವಾರಣೆಗೆ ಉಪಯೋಗಿಸಬಹುದೆಂದು ಕಂಡು ಬಂದಿದೆ.


**ತಾಂತ್ರಿಕ ಮಾಹಿತಿ**
ಡಾ. ರಮೇಶ ಬಾಬು, ಪ್ರಾಧ್ಯಾಪಕರು (ಬೇಸಾಯಶಾಸ್ತ್ರ)
ಕೃಷಿ ವಿಶ್ವವಿದ್ಯಾಲಯ, ಧಾರವಾಡ

**ಲೇಖಕರು**
ಡಾ.ಎಸ್.ಎಂ.ಹಿರೇಮಠ, ಡಾ.ಕೆ.ಪಿ.ಗುಂಡಣ್ಣವರ,
ಡಾ.ಸಿ.ಜೆ.ಕುಮಾರ ಹಾಗೂ ಡಾ. ಉಮಾ ಕುಲಕರ್ಣಿ

**ಸಂಪಾದಕರು ಹಾಗೂ ಪ್ರಕಾಶಕರು**
ಡಾ. ಎಸ್.ಎಂ.ಮಂಟೂರ, ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

**ಅಕ್ಷರ ಜೋಡಣೆ ಮತ್ತು ವಿನ್ಯಾಸ**
ಶ್ರೀಮತಿ ಶೈಲಜಾ ಗಲಗಲಿ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**
ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ್,
ಕೃಷಿ ವಿಶ್ವವಿದ್ಯಾಲಯ, ಧಾರವಾಡ ಪೊ : 0836–2444272
**ಮಿಂಚಂಚೆ** : pc_kvkd@rediffmail.com,
**web :** www.kvkdharwad.org


# ಕೃಷಿ ವಿಶ್ವವಿದ್ಯಾಲಯ, ಧಾರವಾಡ



# ಸಾವಯುವ ಕೃಷಿಯಲ್ಲಿ ಕೀಟಗಳ ಸಮಗ್ರ ನಿರ್ವಹಣೆ

**ಹಸ್ತ ಪತ್ರಿಕೆ** 2015

**ಕೃಷಿ ವಿಜ್ಞಾನ ಕೇಂದ್ರ**
**ಸೈದಾಪೂರ ಫಾರ್ಮ, ಧಾರವಾಡ**

# ಸಾವಯುವ ಕೃಷಿಯಲ್ಲಿ ಕೀಟಗಳ ಸಮಗ್ರ ನಿರ್ವಹಣೆ

ಕೀಟ ಹತೋಟಿಯಲ್ಲಿ ಅನೇಕ ವಿದಿ ವಿಧಾನಗಳಿದ್ದು ಅದರಲ್ಲಿ ಒಂದಕ್ಕಿಂತ ಹೆಚ್ಚು ವಿಧಾನಗಳನ್ನು ಸೂಕ್ತ ರೀತಿಯಲ್ಲಿ ಸಂದರ್ಭನುಸಾರವಾಗಿ ಅಳವಡಿಸಿ ನಿಸರ್ಗದಲ್ಲಿ ಇತರ ಕ್ರಿಯೆಗಳಿಗೆ ಮಾರಕವಾಗದಮತೆ ಅಗತ್ಯವಿದ್ದಲ್ಲಿ ಮಾತ್ರ ಕೀಟದ ಸಂಖ್ಯೆಯನ್ನು ಆರ್ಥಿಕ ನಷ್ಟದ ರೇಖೆಗಿಂತ ಕೆಳಗಿಳಿಸುವುದೇ ಸಮಗ್ರ ಕೀಟ ನಿರ್ವಹಣೆಯ ಉದ್ದೇಶ. ಸಾವಯುವ ಕೃಷಿಯಲ್ಲಿ ಕೀಟ ನಿರ್ವಹಣೆ ಒಂದು ಸವಾಲಾದರೂ ಕಷ್ಟ ಸಾಧ್ಯವಿಲ್ಲವೆಂಬುದನ್ನು ಮನಗಾಣಬೇಕು. ಸಆವಯವ ಕೃಷಿಯಲ್ಲಿ ಸಮಗ್ರ ಕೀಟ ನಿರ್ವಹಣೆಗೆ ಅನೇಕ ಪದ್ಧತಿಗಳಿದ್ದು ಹೆಚ್ಚಿನವು ಖರ್ಚಿಲ್ಲದೆ ನಮ್ಮ ಬೆಳೆ, ಸಾಗುವಳಿ, ಪದ್ಧತಿ ಬೆಳೆ ಪರಿವರ್ತನೆ, ಜೈವಿಕ ವೈವಿದ್ಯತೆ, ಮಿಶ್ರಬೆಳೆ, ಬಲೆ ಬಳೆ, ತಡೆಬೆಳೆ, ಅಂತರ ಬೆಳೆ, ನೀರಿನ ಸಮಗ್ರ ಬಳಕೆ ಅನೇಕ ಸಸ್ಯಗಳು ಹಾನಿಕಾರಕ ಕೀಟ ಹಾಗೂ ರೋಗ ಹತೋಟಿ ಮಾಡುವ ಗುಣ ಹೊಂದಿರುವುದು ಇವುಗಳನ್ನಾಗಲೇ ಅನೇಕ ರೈತರು ಕೀಟಾಷಧಿಯಾಗಿ ಉಪಯೋಗಿಸುತ್ತಿರುವುದು ಕಂಡು ಬಂದಿದೆ.

**ಸಮಗ್ರ ಕೀಟ ನಿರ್ವಹಣೆಯಲ್ಲಿ ಬೌತಿಕ ವಿಧಾನಗಳು:**

**ಬೆಳೆಕಿನ ಬಲೆಗಳು :** ಅನೇಕ ಕೀಟಗಳು ಬೆಳಕಿಗೆ ಆಕರ್ಷಿತವಾಗುವದರಿಂದ ಬೆಳಕಿನ ಬಲೆಗಳನ್ನು ಹೊಲಗಳಲ್ಲಿ ಹಾಕುವದರಿಂದ ಇವುಗಳನ್ನು ನಿಯಂತ್ರಿಸುವುದಲ್ಲದೆ ಅವುಗಳ ಸಂಖ್ಯೆಯನ್ನಾದರಿಸಿ ಬೇರೆ ಹತೋಟಿ ಕ್ರಮಗಲನ್ನು ಅನುಸರಿಸಿ ಅಂತಹ ಕೀಟಗಳು ಬಾಧೆ ಮಾಡುವುದಕ್ಕಿಂತ ಮುಂಚೆ ಹತೋಟಿ ಮಾಡಬಹುದಾಗಿದೆ.

ಕೆಂಪುತಲೆ ಕಂಬಳಿಹುಳುದ ಪತಂಗ, ಗೊಣ್ಣೆಹುಳುಗಳು, ಮುಂಗಾರು ಮಳೆ ಬಿದ್ದ ತಕ್ಷಣ ಅವುಗಳನ್ನು ಬೆಂಕಿ ಬಲೆಗೆ ಆಕರ್ಷಿಸಿ ಕೊಲ್ಲುವದರಿಂದ ಮುಂದೆ ಇವುಗಳಿಂದಾಗುವ ಬಾಧೆ ತಡಗಟ್ಟಬಹುದು. ಭತ್ತದ ಕಾಂಡ ಕೊರಕ, ಶೇಂಗಾದಲ್ಲಿ ಬರುವ ಸೂರಳಿ ಪೂಚಿ, ರೈನಾಸಿರಸ್ ದುಂಬಿ, ಹತ್ತಿ ಕಾಯಿಕೊರಕ, ಕೊಂಬಿನ ಹಸಿರು ಹುಳುವಿನ ಪತಂಗ, ಹಣ್ಣಿನ ರಸ ಹೀರುವ ಪತಂಗ, ಜೀಗಿಹುಳು ಇತ್ಯಾದಿಗಳನ್ನು ನಿಯಂತ್ರಿಸಬಹುದು.

**ಯಾಂತ್ರಿಕ ಕ್ರಮಗಳು:**

ಗುಂಪಾಗಿರುವ, ಕೆಂಪುತಲೆ ಹಾಗೂ ಕಪ್ಪು ತಲೆ ಕಂಬಳಿಹುಳಗಳು, ತಂಬಾಕಿನ ಕ್ಭಿಡೆ, ಭತ್ತದ ಕಾಂಡ ಕೊರಕದ ತತ್ತಿಯ ಗುಂಪು ಹಾಗೂ ಚಿಕ್ಕದಾಗಿರುವ ಮರಿಹುಳಗಳನ್ನು ದೊಡ್ಡದಾದ ಕೊಂಬಿನ ಹುಳು, ಕೆಂಪುತೆಲೆ ಕಂಬಳಿಹುಳಗಳನ್ನು ಕೈಯಿಂದ ಆರಿಸಿ ನಾಶಪಡಿಸುವದು ಹೆಚ್ಚು ಪರಿಣಾಮಕಾರಿ. ಬದನೆ ಕಾಯಿ ಕೊರಕದ ಬಾಧೆಯಾದ ಟೊಂಗೆ ಹಾಗೂ ಕಾಯಿ, ತೋಟಗಳಲ್ಲಿ ಹಣ್ಣಿನ ನೋಣದ ಬಾಧೆಗೊಳಗಳಾಗಿ ಬಿದ್ದ, ಮಾವು, ಪೇರಲ, ಬಾರೆ ಮುಂತಾದ ಹಣ್ಣುಗಳನ್ನು ಆರಿಸಿ ನಾಶಪಡಿಸುವುದು. ಮಾವಿನ ಗಿಡ ಹಾಗೂ ಹಣ್ಣಿನ ಗಿಡಗಳ ಕಾಂಡಕ್ಕೆ ಗ್ರೀಸನ್ನು ಅಥವಾ ಡಾಂಬರ್ ಹಚ್ಚುವೆದರಿಂದ ಹಿಟ್ಟು ತೀಗಣೆ/ಗೆದ್ದಲಿನ ಬಾಧೆ ತಡೆಯಬಹುದು. ಹಳದಿ ಬಣಂಣದ ಡಬ್ಬಿ/ಹಾಳೆ/ತಗಡಿಗೆ ಅಂಟು ಅಥವಾ ಔಡಲ ಎಣ್ಣೆ ಹಚ್ಚಿ ಬೇರೆ ಬೇರೆ ಬೆಳೆಗಳಲ್ಲಿ ಬರುವ ಬಿಳಿ ನೋಣ, ಹೇನು, ಥ್ರೀಪ್ಸ, ಜಿಗಿಹುಳು, ಲೀಪ್ ಮೈನರ್ ಇತ್ಯಾದಿ ರಸಹಿರುವ ಕೀಟಗಳನ್ನು ಆಕರ್ಷಿಸಿ ನಾಶಪಡಿಸಬಹುದು. ಭತ್ತ, ಮೆಣಸಿನಕಾಯಿ ನಾಟಿಮಾಡುವ ಮುನ್ನ ಎಲೆ ತುದಿ ಕತ್ತಿರಿಸುವುದು, ಸಾಸುವೆಯಲ್ಲಿ ಗಿಡದ ತುದಿಯನ್ನು 15 ದಿನಗಳ ಅಂತರದಲ್ಲಿ ಕತ್ತರಿಸುವುದನ್ನು 15 ದಿನಗಳ ಅಂತರದಲ್ಲಿ ಕತ್ತರಿಸುವುದು ಹಾಗೂ ಹತತಿಯಲ್ಲಿ 70–80 ದಿವಸಗಳ ನಂತರ/ ತೋಗರಿಯಲ್ಲಿ 60–65 ದಿವಸಗಳ ನಂತರ ಗಿಡದ ಮೇಲ್ಭಾಗ ಕತ್ತರಿಸುವದರಿಂದ ಬೇರೆ ಬೇರೆ ಕೀಟಗಳನ್ನು ನಿಯಂತ್ರಿಸಬಹುದು. ಬದನೆಯಲ್ಲಿ ಬಾಡಿದ ಟೊಂಗೆಗಳನ್ನು ಕತ್ತರಿಸಿ ನಾಶಮಾಡುವದರಿಂದ ಕುಡಿ ಹಾಗೂ ಕಾಯಿಕೊರಕದ ನಿಯಂತ್ರಣ ಸಾಧ್ಯ ಭತ್ತದ ಗದ್ದೆಯಲ್ಲಿ ಬದುಗಳ ಎರಡುಬದಿಯಲ್ಲಿ ನಿಂತು ಹಗ್ಗವನ್ನು ಬೆಳೆಯ ಮೇಲೆ ಎಳೆಯುವದರಿಂದ ಕಒಳವೆ ಹುಳು ನಿಯಂತ್ರಿಸಬಹುದು.

**ವಿವಿಧ ಬೇಸಾಯ ಪದ್ಧತಿಗಳಿಂದ ಕೀಟಗಳ ನಿರ್ವಹಣೆ :**

ಕೀಟಗಳ ನಿರ್ವಹಣೆಯಲ್ಲಿ ಬೇಸಾಯ ಪದ್ಧತಿಗಳಿಗೆ ಅತಿ ಹೆಚ್ಚಿನ ಪ್ರಾಮುಖ್ಯತೆಯಿರುವದು ಏಕೆಂದರೆ ಈ ಪದ್ಧತಿಯಲ್ಲಿ ಕೀಟ ಹತೋಟಿ ಸಾಧ್ಯ ಕೀಟಗಳಜೀವನ ಚಕ್ರವನ್ನು ಸೂಕ್ತ. ಇವುಗಳಲ್ಲಿ ಪ್ರಮುಖವಾದವು.

**ಸಾಗುವಳಿ ಪದ್ಧತಿ :**

ಬೇಸಿಗೆಯಲ್ಲಿ ಬೆಳಗಿನಜಾವ ಆಳವಾಗಿ ಮಾಗಿ ಉಳುಮೆ ಮಾಡುವದರಿಂದ ಕೀಟದ ಹಾಗೂ ರೋಗದ ವಿವಿಧ ಹಂತಗಳನ್ನು ನಿಯಂತ್ರಿಸಬಹುದು. ಕಬ್ಬಿನಲ್ಲಿ ತಿಂಗಳ ಬೆಳೆಗೆ ಮಣ್ಣು ಏರಿಸುವದರಿಂದ ಕಬ್ಬಿನ ಕಾಂಡ ಕೊರಕದ ಭಾದೆ ಕಡಿಮೆಯಾಗುವುದು. ಜೋಳವನ್ನು ಮೇ–ಜೂನ್ ತಿಂಗಳಲ್ಲಿ ಬಿತ್ತುವುದರಿಂದ ಸೂಳಿನೋಣ, ತೆನೆ ತಿಗಣೆ, ಬೆಂಕಿಹುಳದ ಭಾದೆಯಿಂದ ಮುಕ್ತಿ ಪಡೆಯಬಹುದು. ಶೇಂಗಾದಲ್ಲಿ ಗೊಣ್ಣೆಹಳು ಸಾಸುವೆಯಲ್ಲಿ ಹಾಗೂ ಕುಸುಬೆಯಲ್ಲಿ ಹೇನಿನ ಭಾದೆ, ಭತ್ತದಲ್ಲಿ ಗಂಟುನೊಣ ಎಲೆ ಮಡಚುವ ಹುಳು ತೆನೆ ತಿಗಣೆ ಕಡಲೆ ಹಆಗೂ ಹತ್ತಿಯಲ್ಲಿ ಕಾಯಿಕೊರಕದ ಭಾದ ಕಡಿಮೆಯಾಗುವುದು.

ಶಿಫಾರಸ್ಸು ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೀಜವನ್ನು ಉಪಯೋಗಿಸುವದರಿಂದ ಜೋಳದಲ್ಲಿ ಸೂಳಿನೋಣ ಹಾಗೂ ಶೇಂಗಾದಲ್ಲಿ ಕುಡಿ ಸಾಯುವ ರೋಗದ ಭಾದೆ ಇದಕ್ಕೆ ತದ್ವಿರುದ್ದವಾಗಿ ಕೆಲವು ಬೆಳೆಗಳಲ್ಲಿ ಕಡಿಮೆ ಅಂತರದಲ್ಲಿ ಬಿತ್ತುವದರಿಂದ ಕೀಟದ ಬಾಧೆ ಹೆಚ್ಚಾಗುವುದು. ಜೋಳದಲ್ಲಿ ಕಾಂಡಕೊರೆಯುವ ಹುಳದ ಬಾಧೆ, ಹತ್ತಿಯಲ್ಲಿ ಕಾಯಿಕೊರಕ, ಬಿಳಿ ನೊಣ, ಥ್ರಿಪ್ಸ ಸುಶಿ, ಕಡಲೆ ಹಾಗೂ ತೊಗರಿಯಲ್ಲಿ ಕಾಯಿಕೊರಕ, ಸೋಯಾ ಅವರೆಯಲ್ಲಿ ಕಾಂಡ ನೊಣ ಕಾಯಿ ಹಾಗೂ ಎಲೆ ತಿನ್ನುವ ಕೀಡೆಗಳು, ಭತ್ತದಲ್ಲಿ ಗಂಟುನೊಣ ಎಲೆ ಮಡಚುವ ಹುಳು ತೆನೆ ತಿಗಣೆ ಕಡಲೆ ಹಗೂ ಹತ್ತಿಯಲ್ಲಿ ಕಾಯಿಕೊರಕದ ಬಾಧೆ ಕಡಿಮೆಯಾಗುವುದು.

ಶಿಫಾರಸ್ಸು ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೀಜವನ್ನು ಉಪಯೋಗಿಸುವದರಿಂದ ಜೋಳದಲ್ಲಿ ಸೂಳಿನೋಣ ಹಾಗೂ ಶೇಂಗಾದಲ್ಲಿ ಕುಡಿ ಸಾಯುವ ರೋಗದ ಭಾದೆ ಇದಕ್ಕೆ ತದ್ವಿರುದ್ದವಾಗಿ ಕೆಲವು ಬೆಳೆಗಳಲ್ಲಿ ಕಡಿಮೆ ಅಂತರದಲ್ಲಿ ಬಿತ್ತುವದರಿಂದ ಕೀಟದ ಬಾಧೆ ಹೆಚ್ಚಾಗುವುದು. ಜೋಳದಲ್ಲಿ ಕಾಂಡಕೊರೆಯುವ ಹುಳದ ಭಾದೆ, ಹತ್ತಿಯಲ್ಲಿ ಕಆಯಿಕೊರಕ,ಬಿಳಿ ನೊಣ, ಥ್ರಿಪ್ಸ ಸುಶಿ, ಕಡಲೆ ಹಾಗೂ ತೊಗರಿಯಲ್ಲಿ ಕಾಯಿಕೊರಕ, ಸೋಯಾ ಅವರೆಯಲ್ಲಿ ಕಾಂಡ ನೊಣ ಕಾಯಿ ಹಾಗೂ ಎಲೆ ತಿನ್ನುವ ಕೀಡೆಗಳು, ಭತ್ತದಲ್ಲಿ ಜಿಗಿ ಹುಳದ ಬಾಧೆ ಕಬ್ಬಿನಲ್ಲಿ ಉಣ್ಣೆ ಹೇನಿನ ಪ್ರಮಾಣ ಜಾಸ್ತಿಯಾಗುವುದು.

**ಬಲೆ (ಆಕರ್ಷಕ) ಬೆಳೆ ಬೆಳೆಯುವುದು:**

ಹತ್ತಿ ಮೆಣಸಿನಕಾಯಿ ಟೊಮ್ಯಾಟೊ ಬೆಳೆಗಳಲ್ಲಿ ಚೆಂಡು ಹೂವಿನ ಗಿಡಗಳನ್ನು 10 ಮೀ ಅಂತರದಲ್ಲಿ ಹಾಕಿ ಇವುಗಳಿಗೆ ಬರುವ ಕಾಯಿ ಕೊರಕ, ಕಾಂಡ ಕೊರೆಯುವ ಮೂತಿಹುಳು ಬಾಧೆಯನ್ನು ನಿಯಂತ್ರಿಸಬಹುದು. ಶೇಂಗಾ ಹಾಗೂ ತಂಬಾಕಿನಲ್ಲಿ ಔಡಲ ಅಥವಾ ಸೂರ್ಯಕಾಂತಿಯನ್ನು 10–15ಮೀಟರ ಅಂತರದಲ್ಲಿ ಸಾಲಿನಲ್ಲಿ ಹಾಕಿ ತಂಬಾಕಿನ ಕೀಡೆಯನ್ನು ನಿಯಂತ್ರಿಸಲು ಸಾಸುವೆಯನ್ನು ಬಲೆ ಬೆಳೆಯಾಗಿ ಉಪಹೋಗಿಸಬಹುದು. ಟೊಮ್ಯಾಟೊದಲ್ಲಿ ಬಿಳಿ ನೊಣಗಳ ಬಾಧೆ ನಿಯಂತ್ರಿಸಲು ಕುಂಬಳ ಜಾತಿಯ ಬಳ್ಳಿಯ ಬಳ್ಳಿಗಳನ್ನು ಬಲೆ ಬೆಳೆಯಾಗಿ ಉಪಯೋಗಿಸಬಹುದು.

**ಅಂತರ ಬೆಳೆ ಬೆಳೆಯುವುದು:**

ಅತಿ ಪುರಾತನ ಕಾಲದ ಪದ್ಧತಿಯಾಗಿದ್ದು ಕೀಟ ಹಾಗೂ ರೋಗಗಳಿಂದ ಅಥವಾ ಹವಾಮಾನದ ವೈಪರಿತ್ಯದಿಂದ ಒಂದು ಬೆಳೆ ನಾಶವಾದರೆ ಇನ್ನೊಂದು ಬೆಳೆ ಬುರುವುದಿಲ್ಲದೆ ಬೆಳೆಗಳಲ್ಲಿ ಕೀಡೆ ಹಾಗೂ ರೋಗಗಳ ಕಡಿಮೆಯಗುವುದರ ಜೊತೆಗೆ ಇವುಗಳಿಗೆ ಬರುವ ಶತ್ರು ಕೀಟಗಳ ನೈಸರ್ಗಿಕ ಶತ್ರುಗಳನ್ನು ಉತ್ತೇಜಿಸಿದ ಅನೇಕ ಉದಾಹರಣೆಗಳಿವೆ. ಶೇಂಗಾ + ನವಣೆ, ಹತ್ತಿ+ಶೇಂಗಾ, ಜೋಳ+ತೊಗರಿ, ಸೋಯಾಅವರೆ+ತೊಗರಿ, ಕಡಲೆ+ಕೋತಂಬರಿ, ಟೊಮ್ಯಾಟೊ+ಎಲೆಕೋಸು ಇತ್ಯಾದಿ

**ಗಡಿಬೆಳೆ (Border crop)**

ಹೊಲದ ಸುತ್ತಲೂ ಅಂದರೆ ಮುಖ್ಯ ಬೆಳೆಗಳಾದ ಮೆಣಸಿನಕಾಯಿ, ಉಳ್ಳಾಗಡ್ಡಿ ಹತ್ತಿಸುತ್ತಲೂ ಗಡಿ ಬೆಳೆಯನ್ನು ಮೆಕ್ಕೆ ಜೊಳ/ಜೋಳ 3–6 ಸಾಳು ಬೆಳೆಯುವದರಿಂದ ಗಾಳಿ ಮುಖಾಂತರ ಪಸರಿಸುವ ಥ್ರಿಸ್ಸನುಶಿ, ಮೈಟನುಶಿ ಅಲ್ಲದೆ ಇತರ ಕೀಟಗಳನ್ನು ಮುಖ್ಯ ಬೆಳೆಗೆ ಬರದಂತೆ ತಡೆಯಬಹುದಲ್ಲದೆ ಗಡಿ ಬೆಳೆಯು ಪರತಂತ್ರ ಹಾಗೂ ಪರಬಕ್ಷಕ ಆಶ್ರಯ ಶಾಣಗಳಂತೆ ವರ್ತಿಸುವು.

**ನಿರೋಧಕ ತಳಿಗಳು**

ಸಾಮಯವ ಕೃಷಿಯಲ್ಲಿ ನಿರೋದಕ ತಳಿಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಸಾಮಾನ್ಯವಾಗಿ ಸ್ಥಳಿಯವಾಗಿ ಲಭ್ಯವಿರುವ ತಳಿಗಳು ಆಯಾ ಪ್ರದೇಶದಲ್ಲಿ ಬರುವ ಕೀಡೆ ಹಾಗು ರೋಗದ ಬಾಧೆಗೆ ಅಷ್ಟೊಂದು ತುತ್ತಾಗತ್ತಿರುವದಿಲ್ಲ ಅಲ್ಲದೆ ಅವುಗಳಿಗೆ ನಿರೋಧಕ ಶಕ್ತಿ ಇರುವದರಿಂದಲೇ ಅವು ಆ ಪ್ರೇಶದಲ್ಲಿ ಬರುವ ಪ್ರಮುಖ ಕೀಡೆ ಹಾಗೂ ರೋಗಕ್ಕೆ ತುತ್ತಾಗದ ತಳಿಗಳನ್ನು ಬೆಳೆಯುವುದು ಅತಿ ಅವಶ್ಯಕ.

**ಪೀಡೆ ನಿರ್ವಹಣೆಯಲ್ಲಿ ನೈಸರ್ಗಿಕ ಶತ್ರುಗಳ ಬಳಕೆ**

ಜೈವಿಕ ಕೀಟ ಹತೋಟಿಯೆಂದರೆ ಪೀಡೆ ಕೀಡೆಗಳ ಸ್ವಾಭಾವಿಕ ಶತ್ರುಗಳಾದ ಪರತಂತ್ರ ಜೀವಿಗಳು, ಪರಭಕ್ಷಕಗಳು ಹಾಗೂ ರೋಗಾಣುಗಳನ್ನು ಉಪಯೋಗಿಸಿ ಪೀಡೆ ಕೀಟದ ಹತೋಟಿ ಮಾಡುವುದು. ಇದು ಅತ್ಯಂತ ಪರಿಣಾಮಕಾರಿ ಶಾಶ್ವತ, ಪರಿಸರಲದಲಿ ಸಮತೋಲನ ಕಾಪಾಡಿಕೊಮಡು ಬರುವ ಒಂದು ಸರಳ ವಿಧಾನವಾಗಿದೆ.

**ಸಂವರ್ದಿತ ಕ್ರಿಯೆಯಿಂದ ಜೈವಿಕ ಕೀಟ ಹತೋಟಿ**

ಸಂವರ್ದಿತ ಜೈವಿಕ ಕೀಟ ಹತೋಟಿಯಲ್ಲಿ ಪ್ರಮುಖ ಕೀಟ ಪೀಡೆಗಳ ಹತೋಟಿಗಾಗಿ ಬೇರೆ ಪ್ರದೇಶಗಳಿಂದಾಗಲಿ ಅಥವಾ ಆ ಪ್ರದೇಶದಲ್ಲಿರುವ ಪ್ರಮುಖ ನೈಸರ್ಗಿಕ ಶಸ್ತ್ರುಗಳನ್ನು ಕಂಡು ಹಿಡಿದು ಅವುಗಳನ್ನು ಪ್ರಯೋಗಾಲಯದಲ್ಲಿ ಉತ್ಪಾದಿಸಿ ಜೈವಿಕ ಹತೋಟಿಯಲ್ಲಿ ಉಪಯೊಗಿಸುವುದಕ್ಕೆ ಸಂವರ್ದಿತ ಜೈವಿಕ ಕೀಟಹತೋಟಿ ಎನ್ನುವರು.

| ಅ.ಸಂ | ಬೆಳೆ | ಪೀಡೆ | ಪರತಂತ್ರ ಜೀವಿಗಳು | ಪ್ರಮಾಣ ಮತ್ತು ವಿಧಾನ |
|---|---|---|---|---|
| 1. | ಭತ್ತ, ಜೋಳ, ಮೆಕ್ಕೆಜೋಳ, ಹತ್ತಿ, ಕಬ್ಬು, ಟೋಮೆಟೊ ಬದನೆ | ಕಾಂಡ ಕೊರಕಗಳು ಗರಿ ಮಡಚುವ ಹುಳು ಹತ್ತಿಕಾಯಿ ಕೊರಕ ಬದನೆ ಕುಡಿ ಹಾಗೂ ಕಾಯಿ ಕೊರಕ | ಟ್ರೈಕೊಗ್ರಾಮ ಕಿಲೊನಿಸ್ | ಬಿತ್ತಿದ ಅಥವಾ ನಾಟಿ ಮಾಡಿದ 30–04 ದಿನಗಳ ನಂತರ ಹೆಕ್ಟೇರಿಗೆ 50,000 ದಂತೆ (ಒಂದು ವಾರದ) ಅಂತರದಲ್ಲಿ 4–5 ಸಾರಿ ಬಿಡಬೇಕು. |
| 2 | ತೆಂಗು | ಕಪ್ಪು ತಲೆ ಹುಳು | ಗೋನಿಯೋಜಿಸ್ ನೆಫಂಟಿಡಿಸ್, ಬ್ರೆಕಿಮೆರಿಯಾ | ಪ್ರತಿ ಗಿಡಕ್ಕೆ 10–12 ಅಥವಾ 3000 ಪ್ರೌಡ ಕೀಟಗಳನ್ನು ಒಂದು ಎಕರೆಗೆ ಬೀಡಬೇಕು. |